ದಿನಾಂಕ 29.04.2026 ರ ಮಧ್ಯಂತರ ಅರ್ಜಿ ಸಂಖ್ಯೆ 21 ಮತ್ತು 22 ರ ಆದೇಶದ ಅನ್ವಯ

**ಸಾಕ್ಷಿಗೆ ದಿನಾಂಕಃ09-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: 4 ನೇ ಪ್ರತಿವಾದಿ ಪರ ಶ್ರೀ. CSS ವಕೀಲರಿಂದ ::**

ನಾನು ನಂತರದಲ್ಲಿ ಸೇರಿದ ಐಟಂ ನಂಬರ್ 8 ರಿಂದ 13 ಆಸ್ತಿಗಳ ಬಗ್ಗೆ ನನಗೆ ದಾವೆ ಹೂಡುವ ಸಮಯದಲ್ಲಿ ಮಾಹಿತಿ ಇತ್ತು. 1 ನೇ ಪ್ರತಿವಾದಿ KSRTC ಅಲ್ಲಿ ಎಷ್ಟು ವರ್ಷಗಳ ಕಾಲ ಕೆಲಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಜೀವಂತ ಇದ್ದ ಸಮಯದಲ್ಲಿ 1 ನೇ ಪ್ರತಿವಾದಿ ಸದರಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದ ಸಮಯದಲ್ಲಿ 2 ನೇ ಪ್ರತಿವಾದಿ ಮುಂಡ್ರೆ ಗ್ರಾಮದಲ್ಲಿ ಇದ್ದರು ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ತಂದೆ ಜೀವಂತ ಇದ್ದ ಸಮಯದಲ್ಲಿ ಒಂದು ಅಂಗಡಿ ಇಟ್ಟಿದ್ದರು ಎಂದರೆ ಸರಿ. ದಾವಾ ಐಟಂ 8 ರಿಂದ 13 ಆಸ್ತಿಗಳನ್ನು ನಾನು ಈ ದಾವೆಯಲ್ಲಿ ತಿದ್ದುಪಡಿ ಮುಖಾಂತರ ಸೇರಿಸಿರುತ್ತೇನೆ ಎಂದರೆ ಸರಿ. ನನ್ನ ಸಹೋದರರು ಅವರ ಸ್ವಂತ ದುಡಿಮೆಯಿಂದ ಕೆಲವು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು 4 ನೇ ಪ್ರತಿವಾದಿಯು ಅವರ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿ ಅವರ ಅಂಗಡಿಗೆ ಅಬಕಾರಿ ಪರವಾನಗಿ ಪಡೆದಿದ್ದರು ಎಂದರೆ ಸಾಕ್ಷಿ ಅದನ್ನು ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಒಟ್ಟಿಗೆ ಸೇರಿ ಪಡೆದಿದ್ದರು ಎಂದು ನುಡಿಯುತ್ತಾರೆ. ಸದರಿ ಪರವಾನಗಿ 4 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಐಟಂ 8 ರಿಂದ 13 ಆಸ್ತಿಗಳಲ್ಲಿ ನನಗೆ ಹಿಸ್ಸೆ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಪ್ರತಿವಾದಿಗಳ ಹೆಂಡತಿ ಮನೆಯಿಂದ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಈಗ ಹೇಳುತ್ತಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. 1 ನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಲು ನನ್ನ ಪ್ರಕಾರ ತೊಂದರೆ ಇರುವುದಿಲ್ಲ. 3 ನೇ ಪ್ರತಿವಾದಿಯು ಸಂತೆ ಮೈದಾನದಲ್ಲಿ ಇಟ್ಟಿರುವ ಅಂಗಡಿ ಸಹ ನಮ್ಮ ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ಮಾಡಲಾಗಿರುತ್ತದೆ ಎಂದರೆ ಅದು ಅವರ ಸ್ವಂತ ದುಡ್ಡಿನಿಂದ ಮಾಡಿಕೊಂಡಿರುತ್ತಾರೆ ಎಂದು

ನುಡಿಯುತ್ತಾರೆ. ನಾನು ಈಗ ಹೇಳುತ್ತಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ನಾನು ದಾವೆಯನ್ನು 3 ನೇ ಪ್ರತಿವಾದಿಯ ಜೊತೆ ಶಾಮಿಲಾಗಿ ಹಾಕಿರುತ್ತೇನೆ ಎಂದರೆ ಸರಿ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: